7. ಹರಾಜು ಡಿಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡಿಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನ್ಲಲಿ ರಿಜಿಸ್ಟರ್ ಮಾಡಲ್ಪಟ್ಟು ಡಿಪ್ಯೂಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನ ವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡಿಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಆಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಶೀಲ್ ಕಟ್ಟುಪಡಗಳು.		ಜಮೀನು.				ಸದರಿ ಬರಬೇಕಾದ ಸೊಟಿನ ಮೇಲೆ ಸುಂಕದಾದ ಬಾಕಿ ಹೊಲಲಗ್ಗು.
				ಕಟ್ಟುಪಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಮಿಸ್ಲೀ ತರೀ ಅಥವಾ ಬಾಗಾಯತು.	ಎಷ್ಟು.	ಎಕ್ಕಾರ.	
1	2	3	4	5	6	7	8	9	10	11
					ರೂ. ಆ. ಪೈ.			ಎ. ಗು.	ರೂ. ಆ. ಪೈ.	ರೂ. ಆ. ಪೈ.
ಚಿಕ್ಕನಾಯಕನಹಳ್ಳಿ	ಜಾಗರ.	ನೆಲಿನ ಹುಲುವತ್ತಿ	ಡಾಕ್ಟರ್ ಸಿದ್ಧಿಸ್ಮೃತ ಸಾಹೆಬರು ಬಿ. ಎ. ಬಿಟೋಜಂಟ್.			17	ಕಾಫೀ	79 12	119 0 0	288 1 1 ಮತ್ತು ಬಡ್ಡಿ ಮತ್ತೆ ರಇತರ

ಬಿ. ಜೆ. ಕೊಮಾರ್‌ಸಾಮಿ ನಾಯಕ್,
ಫಾರ್ ಡಿಪ್ಯೂಟಿ ಕಮ್ಮಿಷನರ್.

ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಕಡೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 28ನೇ ಮಾರ್ಚ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಿಸುವ ಚೌಬೀನೆ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ಡಿಪೋದಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1896ನೇ ಏಪ್ರೆಲ್ 27ನೇ ತಾರೀಖಿನಲ್ಲಿ ಹರಾಜು ನಡಿಸಲ್ಪಡುವದು.

ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ತುದಿತುಂಡುಗಳು.
ತರೀಕೆರೆ	27—4—1896	2968

ಹರಾಜು ಷರತ್ತು.—ಸ್ರ 1895ನೇ ಇಸವಿ 15ನೇ ಮಾರ್ಚ್ 15-229 ಆರ್. ಯಫ್. 155—92ನೇ ನಂಬರು ಗವರ್ಮೆಂಟ್ ಇಸ್ತಿಹಾರ್‌ನಲ್ಲಿ ಪಾಯಿಷ್ ಆಗಿರತಕ್ಕ ರೂಲ್ಸ್ ಹರಾಜು ವೇಳೆ ವೋದಲ್ಪಡುವದು.

ಬಿ. ಹಿರಾಜಿಂಗ್,
ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್.

MYSORE GOVERNMENT CENTRAL PRESS, BANGALORE—1896.